ಶ್ರೀ ಖಮರುಲ್ ಇಸ್ಲಾಂ: ಒಂದು ನಿಮಿಷ, ನಾನು ಮಾತನಾಡುತ್ತೇನೆ. In Tamilnadu and Maharashtra, I will produce the order, they cannot purchase from any State and in Maharashtra 75% they have to purchase. Another thing... ನಾನು ಹೇಳುತ್ತೇನೆ...

ಅಧ್ಯಕ್ಷರು: No. You need not answer. ತಾವು ಕುಳಿತುಕೊಳ್ಳಿ, ಮಾನ್ಯ ಮುಖ್ಯಮಂತ್ರಿಯವರು ಉತ್ತರ ಕೊಡಬೇಕಾಗಿಲ್ಲ. ನಾನು ಹ್ಯಾರಿಸ್‌ರವರನ್ನು ಕರೆದಿದ್ದೇನೆ. It will not go on record, No. you are a senior member, if you are not able to hear...

ಶ್ರೀ ಎನ್.ಎ. ಹ್ಯಾರಿಸ್: ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಯವರು ಇಲ್ಲೇ ಇದ್ದಾರೆ. ಈ ವಿಷಯವಾಗಿ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಿ, ಇಲ್ಲವೆಂದರೆ ಅರ್ಧ ಗಂಟೆ ಕಾಲ ಚರ್ಚೆಗೆ ಅವಕಾಶ ಕೊಡಿ, ಏಕೆಂದರೆ ಇದರಲ್ಲಿ ಸುಮಾರು ವಿಷಯಗಳು ಇವೆ, ಅದರ ಬಗ್ಗೆ ಚರ್ಚೆ ಮಾಡೋಣ.

ಶ್ರೀ ಸಿದ್ದು ಸವದಿ: ಮಾನ್ಯ ಅಧ್ಯಕ್ಷರೆ, ಅರ್ಧ ಗಂಟೆ ಚರ್ಚೆಗೆ ಅವಕಾಶ ಕೊಡಿ.

ಅಧ್ಯಕ್ಷರು: ಆಯಿತು, ಅರ್ಧ ಗಂಟೆ ಕಾಲ ಚರ್ಚೆಗೆ ಅವಕಾಶ ಕೊಡುತ್ತೇನೆ.

ಬಾಗೇಪಲ್ಲಿ – ಗುಡಿಬಂಡೆ ತಾಲ್ಲೂಕುಗಳಲ್ಲಿ ಸಣ್ಣ ಕೈಗಾರಿಕೆಯ ಸಲುವಾಗಿ ಸ್ವಾಧೀನ ಪಡಿಸಿಕೊಂಡಿರುವ ಜಮೀನುಗಳು

150(521) ಶ್ರೀ ಸಂಪಂಗಿ ಎನ್. (ಬಾಗೇಪಲ್ಲಿ) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳನ್ನು ದಯವಿಟ್ಟು ಉತ್ತರಿಸುವರೇ ?

ಅ) ಬಾಗೇಪಲ್ಲಿ–ಗುಡಿಬಂಡೆ ತಾಲ್ಲೂಕುಗಳಲ್ಲಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯಿಂದ ಇದುವರೆವಿಗೂ ಯಾವ ಯಾವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ;

ಆ) ಇದಕ್ಕಾಗಿ ಎಷ್ಟು ಎಕರೆ ಜಮೀನನ್ನು ಸರ್ಕಾರ ಸ್ವಾಧೀನ ಪಡಿಸಿಕೊಂಡಿದೆ ಹಾಗೂ ಸ್ವಾಧೀನಪಡಿಸಿಕೊಂಡಿರುವಂತಹ ಜಮೀನುಗಳನ್ನು ಹೊಂದಿರುವ ರೈತರಿಗೆ ಪರಿಹಾರ ಧನವನ್ನು ನೀಡಲಾಗಿದೆಯೇ ; ಎಷ್ಟು ಹಣವನ್ನು ನೀಡಲಾಗಿದೆ (ವಿವರ ಒದಗಿಸುವುದು) ;

ಇ) ಸಣ್ಣ ಕೈಗಾರಿಕೆಯನ್ನು ಸ್ಥಾಪಿಸಲು ಯೋಜಿಸಲಾಗಿದೆಯೇ ;

ಈ) ಹಾಗಿದ್ದಲ್ಲಿ, ಕೆ.ಐ.ಎ.ಡಿ.ಬಿ. ವತಿಯಿಂದ ಸಣ್ಣ ಕೈಗಾರಿಕೆ ಸ್ಥಾಪಿಸಲು ನಿವೇಶನಗಳನ್ನು ವಿಂಗಡಿಸಲಾಗಿದೆಯೇ ; ವಿಂಗಡಿಸಿದ್ದಲ್ಲಿ ಕೈಗಾರಿಕಾ ಫಲಾನುಭವಿಗಳಿಗೆ ಯವಾಗ ನಿವೇಶನವನ್ನು ನೀಡಲಾಗುವುದು?

ಶ್ರೀ ಮುರುಗೇಶ್ ಆರ್. ನಿರಾಣಿ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು) :

ಅ) ಕೆ.ಐ.ಎ.ಡಿ.ಬಿ. ವತಿಯಿಂದ ಬಾಗೇಪಲ್ಲಿ ತಾಲ್ಲೂಕು, ಬಾಗೇಪಲ್ಲಿ ಮತ್ತು ಕೊಂಡರೆಡ್ಡಿಪಲ್ಲಿ ಗ್ರಾಮಗಳಲ್ಲಿ ಕೈಗಾರಿಕಾ ಪ್ರದೇಶಕ್ಕಾಗಿ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ. ಗುಡಿಬಂಡೆ ತಾಲ್ಲೂಕಿನ ವ್ಯಾಪ್ತಿಯಲ್ಲಿ ಕೈಗಾರಿಕಾ ಪ್ರದೇಶಕ್ಕಾಗಿ ಯಾವುದೇ ಜಮೀನನ್ನು ಸ್ವಾಧೀನಪಡಿಸಿಕೊಂಡಿರುವುದಿಲ್ಲ.

ಆ) ಬಾಗೇಪಲ್ಲಿ ತಾಲ್ಲೂಕಿನ ಬಾಗೇಪಲ್ಲಿ ಮತ್ತು ಕೊಂಡರೆಡ್ಡಿಪಲ್ಲಿ ಗ್ರಾಮಗಳಲ್ಲಿನ ಒಟ್ಟು 192 ಎಕರೆ ಜಮೀನನ್ನು ಈವರೆಗೆ ಕೈಗಾರಿಕಾ ಪ್ರದೇಶಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾಗಿದೆ. ಈ ಜಮೀನಿನ ಭೂ ಮಾಲೀಕರಿಗೆ ಎಕರೆಯೊಂದಕ್ಕೆ ರೂ. 15.00 ಲಕ್ಷದಂತೆ ರೂ. 16,72,50,000/–ಗಳ ಅನುದಾನವನ್ನು ಭೂ ಪರಹಾರ ಪಾವತಿಗಾಗಿ ಬಿಡುಗಡೆ ಮಾಡಲಾಗಿದೆ. ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ: 6758/2008ರಲ್ಲಿ ದಿನಾಂಕ: 19.06.2010ರಂದು ಮಧ್ಯಂತರ ಆದೇಶ ಹೊರಡಿಸಿ, ಈ ಯೋಜನೆಯ ಕಲಂ 28(1)ರ ಪ್ರಾಥಮಿಕ ಅಧಿಸೂಚನೆ ಹಾಗೂ ಕಲಂ 28(4)ರ ಅಂತಿಮ ಅಧಿಸೂಚನೆಗಳಿಗೆ ತಡೆಯಾಜ್ಞೆ ನೀಡಿದೆ. ತಡೆಯಾಜ್ಞೆ ತೆರವುಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಬಾಗೇಪಲ್ಲಿ ತಾಲ್ಲೂಕಿನ ಕೊಂಡರೆಡ್ಡಿಪಲ್ಲಿ ಮತ್ತು ಹೊಸಹುಡ್ಯ ಗ್ರಾಮಗಳಲ್ಲಿನ ಒಟ್ಟು 809.31 ಎಕರೆ ಜಮೀನಿಗೆ ದಿನಾಂಕ:

26.12.2008ರಂದು ಪ್ರಾಥಮಿಕ ಅಧಿಸೂಚನೆ ಹೊರಡಿಸಲಾಗಿದ್ದು, ಕಲಂ 28(3)ರ ವಿಚಾರಣೆ ಮತ್ತು ಜಂಟಿ ಅಳತೆ ಕಾರ್ಯ ಪ್ರಗತಿಯಲ್ಲಿದೆ.

ಇ) ಹೌದು.

ಈ) ಕೈಗಾರಿಕಾ ಪ್ರದೇಶವನ್ನು ಅಭಿವೃದ್ಧಿಪಡಿಸಿ, ಸಣ್ಣ ಕೈಗಾರಿಕೆ ಸ್ಥಾಪಿಸಲು ನಿವೇಶನಗಳನ್ನು ವಿಂಗಡಿಸಿ, ಉದ್ಯಮಗಳಿಗೆ ಹಂಚಿಕೆ ಮಾಡಲಾಗುವುದು.

ಪ್ರಶ್ನೆ ಸಂಖ್ಯೆ: 150(521)

ಶ್ರೀ ಎನ್. ಸಂಪಂಗಿ: ಮಾನ್ಯ ಅಧ್ಯಕ್ಷರೆ, ಸರ್ಕಾರ ಕೊಟ್ಟಿರುವ ಉತ್ತರದಲ್ಲಿ ಬಾಗೇಪಲ್ಲಿ ತಾಲ್ಲೂಕಿನಲ್ಲಿ 192 ಎಕರೆ ಜಮೀನನ್ನು ಇದುವರೆಗೆ ಕೈಗಾರಿಕಾ ಪ್ರದೇಶಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾಗಿದೆಯೆಂದು ಹೇಳಿದ್ದಾರೆ. ಅದೇ ಪ್ರಕಾರವಾಗಿ ದಿನಾಂಕ: 19.06.2010ರಂದು ಮಧ್ಯಂತರ ಆದೇಶ ಹೊರಡಿಸಿ, ಈ ಯೋಜನೆಯ ಕಲಂ 28(1)ರ ಪ್ರಾಥಮಿಕ ಅಧಿಸೂಚನೆ ಹಾಗೂ ಕಲಂ 28(4)ರ ಅಂತಿಮ ಅಧಿಸೂಚನೆಗಳಿಗೆ ತಡೆಯಾಜ್ಞೆ ನೀಡಲಾಗಿದೆಯೆಂದು ಹೇಳಲಾಗಿದೆ. ಅದೇ ರೀತಿಯಾಗಿ ಬಾಗೇಪಲ್ಲಿ ತಾಲ್ಲೂಕಿನ ಕೊಂಡರೆಡ್ಡಿಪಲ್ಲಿ ಮತ್ತು ಹೊಸಹುಡ್ಯ ಗ್ರಾಮಗಳಲ್ಲಿನ 809 ಎಕರೆಗೆ ಪ್ರಾಥಮಿಕ ಅಧಿಸೂಚನೆ ಹೊರಡಿಸಲಾಗಿದ್ದು, ಕಲಂ 28(3)ರ ವಿಚಾರಣೆ ಮತ್ತು ಜಂಟಿ ಅಳತೆ ಕಾರ್ಯ ಪ್ರಗತಿಯಲ್ಲಿದೆಯೆಂದು ಹೇಳಿದ್ದೀರಿ. ತಾವು ದಿನಾಂಕ: 19.06.2010ರಲ್ಲಿ ಕರ್ನಾಟಕ ಉಚ್ಚ ನ್ಯಾಯಾಲಯವು ತಡೆಯಾಜ್ಞೆಯನ್ನು ಕೊಟ್ಟಿದೆ. ಇದು ಆಗಿ ಇಷ್ಟು ದಿವಸಗಳಾದರೂ ಇನ್ನೂ ತಾವು ತಡೆಯಾಜ್ಞೆಯನ್ನು ತೆರವುಗೊಳಿಸುವುದಕ್ಕೆ ಏಕೆ ಪ್ರಯತ್ನ ಮಾಡಿಲ್ಲ ? ಈಗ ನನಗೆ ಬೇಕಾಗಿರುವುದೇನೆಂದರೆ, ತಾವು ಈ ಪರಿಹಾರವನ್ನು ರೈತರಿಗೆ ಕೊಡುವುದಕ್ಕೆ ಈಗಾಗಲೇ ಹಣವನ್ನು ಕೂಡಿಸಿಕೊಂಡಿದ್ದೀರಿ. ತಾವು ತತ್‌ಕ್ಷಣ ಕೋರ್ಟ್‌ನಲ್ಲಿರುವಂಥ ತಡೆಯಾಜ್ಞೆಯನ್ನು ತೆರವುಗೊಳಿಸಬೇಕಾಗುತ್ತದೆ, ಅಲ್ಲಿ 20,000 ಜನ ನಿರುದ್ಯೋಗಿ ಯುವಕರಿದ್ದಾರೆ. ಅಲ್ಲಿಗೆ ಒಳ್ಳೆಯ ಕಾರ್ಖಾನೆಗಳು ಬರಬೇಕು. ಇನ್ನೊಂದು ವಿಚಾರವೇನೆಂದರೆ, ಡಾ: ನಂಜುಂಡಪ್ಪನವರ ವರದಿಯ

ಪ್ರಕಾರವಾಗಿ ಬಾಗೇಪಲ್ಲಿ ತಾಲ್ಲೂಕು ಬಹಳ ಹಿಂದುಳಿದ ತಾಲ್ಲೂಕೆಂದು ನೀವೇ ಹೇಳಿದ್ದೀರಿ. ಈಗ ಅಲ್ಲಿ ಹೊಸ ಹೊಸ ಕಾರ್ಖಾನೆಗಳು ಬರುವುದಕ್ಕೆ ಏಕೆ ಮುಂದಾಲೋಚನೆ ಮಾಡುತ್ತಿಲ್ಲ ? ಇದರ ಬಗ್ಗೆ ಅಧಿಕಾರಿಗಳು ಏಕೆ ಕೆಲಸ ಮಾಡುತ್ತಿಲ್ಲ ? ಇಲ್ಲಿ ಇರುವ ತಡೆಯಾಜ್ಞೆಯನ್ನು ತೆರವುಗೊಳಿಸಿ ಕಾರ್ಖಾನೆಗಳು ಬರುವುದಕ್ಕೆ ಏಕೆ ಅವಕಾಶ ಕೊಡುತ್ತಿಲ್ಲವೆಂದು ಮಾನ್ಯ ಮಂತ್ರಿಯವರನ್ನು ಕೇಳುತ್ತಿದ್ದೇವೆ.

ಶ್ರೀ ಮುರುಗೇಶ್ ಆರ್. ನಿರಾಣಿ : ಮಾನ್ಯ ಅಧ್ಯಕ್ಷರೆ, ಇದು final notification ಆಗಿ, ರೈತರಿಗೆ ಪ್ರತಿ ಎಕರೆಗೆ ಅಂದಾಜು 5 ಲಕ್ಷ ರೂ.ಗಳಂತೆ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ರೈತರ ಸಭೆಯನ್ನು ಕರೆದು ಅವರು ಇದಕ್ಕೆ ಒಪ್ಪಿಕೊಂಡು ತೀರ್ಮಾನವಾಗಿತ್ತು. ಇದರಲ್ಲಿ ಸಾಕಷ್ಟು ಜನ ರೈತರು ಸಹ ಒಳ್ಳೆಯ compensation ಎಂದು ಒಪ್ಪಿಕೊಂಡು DD ತೆಗೆದುಕೊಳ್ಳುವ ಸಂದರ್ಭದಲ್ಲಿ ನಾವು 16 ಕೋಟಿ 72 ಲಕ್ಷ ರೂ.ಗಳನ್ನು Special D.C. ಯವರಿಗೆ ಹಣವನ್ನು ಸಂದಾಯ ಮಾಡಿದ್ದೇವೆ. ಆದರೆ ಕೆಲವರು ಶೇ.10 ರಿಂದ 15 ರಷ್ಟು ರೈತರಲ್ಲದೇ ಇರುವವರು ಬೇರೆ ಭಾಗಗಳಿಂದ ಬಂದು ಅಲ್ಲಿ ರೈತರಿಗೆ ತಡೆಯಾಜ್ಞೆಯನ್ನು ತರುವಂಥ ಪ್ರಯತ್ನವನ್ನು ಅವರು ಮಾಡಿದ್ದಾರೆ. ಅಲ್ಲಿರುವ ಹಿಂದಿನ ಶಾಸಕರು ಮತ್ತು ಇಂದಿನ ಶಾಸಕರ ಕಳಕಳಿಯಿಂದ ರೈತರು ಹೆಚ್ಚಿನ percentage ನಲ್ಲಿ ಭೂಮಿಯನ್ನು ಕೊಡುವುದಕ್ಕೆ ಒಪ್ಪಿಕೊಂಡಿದ್ದಾರೆ. ಈ ವಿಷಯ ಕೋರ್ಟಿನಲ್ಲಿ ಇರುವುದರಿಂದ ಇದನ್ನು Senior Counsel ಗೆ refer ಮಾಡಿ, Senior Advocate ಅವರನ್ನು ನೇಮಿಸಿ, ಇರುವ ತಡೆಯಾಜ್ಞೆಯನ್ನು ತೆರವುಗೊಳಿಸಿ, ಇದಕ್ಕೆ ಯಾವುದೇ ರೀತಿಯಲ್ಲೂ ಹಣದ ಕೊರತೆ ಇಲ್ಲ, ಮತ್ತೆ ಕೈಗಾರಿಕೆಗಳ ಸ್ಥಾಪನೆ ಮಾಡುವುದಕ್ಕೆ ಸಾಕಷ್ಟು application ಗಳು ಬರುತ್ತಿದ್ದು, ಈ ಬಗ್ಗೆ ಬೇಗನೆ ತೀರ್ಮಾನ ತೆಗೆದುಕೊಂಡು ಇತ್ಯರ್ಥ ಮಾಡುತ್ತೇವೆ.

ಶ್ರೀ ಎನ್. ಸಂಪಂಗಿ : ಎಷ್ಟು ದಿವಸಗಳಲ್ಲಿ ಮಾಡುತ್ತೀರಿ ?

ಶ್ರೀ ಮುರುಗೇಶ್ ಆರ್. ನಿರಾಣಿ : ಕೋರ್ಟ್‌ನಲ್ಲಿ ವಿಷಯವಿರುವುದರಿಂದ ಬೇಗನೆ ಮಾಡುತ್ತೇವೆ. ಇದಕ್ಕೆ ಹಣವನ್ನು ಕೊಟ್ಟಿದ್ದೇವೆ.

ಶ್ರೀ ಎನ್. ಸಂಪಂಗಿ : ಈಗಾಗಲೇ ತಡೆಯಾಜ್ಞೆಯಾಗಿ ಒಂದು ವರ್ಷ ಆಗಿ ಹೋಗಿದೆ. ನಿಮ್ಮ ಅಧಿಕಾರಿಗಳು ಏಕೆ ಭಯ ಪಡುತ್ತಿದ್ದಾರೆ ?

ಅಧ್ಯಕ್ಷರು : ಈ ವಿಷಯ ಕೋರ್ಟ್‌ನಲ್ಲಿರುವುದರಿಂದ ಇಷ್ಟೇದಿವಸವೆಂದು ಹೇಗೆ ಹೇಳುವುದು ?

ಶ್ರೀ ಮುರುಗೇಶ್ ಆರ್. ನಿರಾಣಿ : ಕೋರ್ಟ್‌ನಲ್ಲಿರುವುದರಿಂದ ಇದಕ್ಕೆ Senior Counsel ಅನ್ನು ನೇಮಕ ಮಾಡುತ್ತಿದ್ದೇವೆ. ಈಗಾಗಲೇ Senior Advocate ಅನ್ನು appointment ಮಾಡಿದ್ದೇವೆ. ಇದು ತೀರ್ಮಾನವಾದ ದಿವಸವೇ ನಾವು payment ಮಾಡುವುದಕ್ಕೆ ಪ್ರಾರಂಭ ಮಾಡುತ್ತೇವೆ.

ಹೇಮಾವತಿ ನಾಲೆಯಿಂದ ಚಿಕ್ಕನಾಯಕನಹಳ್ಳಿ ತಾಲ್ಲೂಕಿಗೆ ಕುಡಿಯುವ ನೀರು

151(968) ಶ್ರೀ ಸುರೇಶ್ ಬಾಬು ಸಿ.ಬಿ. (ಚಿಕ್ಕನಾಯಕನಹಳ್ಳಿ) : ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :

ಅ) ತುಮಕೂರು ಹೇಮಾವತಿ ನಾಲೆಯಿಂದ ಹೇಮಾವತಿ ನೀರನ್ನು ಕುಡಿಯುವ ನೀರಿನ ಉದ್ದೇಶಕ್ಕಾಗಿ ಚಿಕ್ಕನಾಯಕಹಳ್ಳಿ ತಾಲ್ಲೂಕು ಸಾಸಲು ಪೆಮ್ಮಲದೇವರ ಹಳ್ಳಿ ಕೆರೆ, ಶೆಟ್ಟಿಕೆರೆ ಮೂಲಕ ಬೋರನ ಕಣಿವೆಗೆ ಹರಿಸುವ ಯೋಜನೆಯು ಯಾವ ಹಂತದಲ್ಲಿದೆ :

ಆ) ಪ್ರಸಕ್ತ ಸಾಲಿನಲ್ಲಿ ಈ ಯೋಜನೆಗೆ ಆಡಳಿತಾತ್ಮಕ ಮಂಜೂರಾತಿ ನೀಡಲಾಗುವುದೇ ಹಾಗೂ ಆಯವ್ಯಯದಲ್ಲಿ ಹಣ ನಿಗದಿಪಡಿಸಿ ಮಂಜೂರಾತಿ ಮಾಡಲಾಗಿದೆಯೇ ;

ಇ) ಇಲ್ಲದಿದ್ದಲ್ಲಿ, ಈ ಯೋಜನೆಯ ಅನುಷ್ಠಾನಕ್ಕೆ ಸರ್ಕಾರವು ಗಮನ ಹರಿಸಲು ಕಾರಣಗಳೇನು ?